ಕಂಪ್ಲೈಂಟ್ ಕೊಡುತ್ತೇನೆ' ಎಂದವರು ಛೇಡಿಸಿದರು.

'ಸರ್, ನಾನು ಮಾಡಿದ್ದು ಸರಿಯಾ, ತಪ್ಪಾ ನನಗೂ ಅನುಮಾನ ಇದೆ. ಕೆಲವರು ಹೇಳುವ ಪ್ರಕಾರ ಭ್ರೂಣಹತ್ಯೆ ಮಹಾಪಾಪವಾದರೆ ನನಗೆ ನರಕ ಗ್ಯಾರಂಟಿ' ಎಂದು ನಗುತ್ತಾ ಹೇಳಿದೆ.

* * *

ನಾನೂ, ಸುಜಾತಾ ಈ ಘಟನೆ ಬಗ್ಗೆ ಮೌನ ವಹಿಸಲು ತೀರ್ಮಾನಿಸಿದ್ದೆವು. ನೂರೆಂಟು ಪ್ರಶ್ನೆಗಳು, ಅನುಮಾನಗಳು, ಅಪವಾದಗಳು ಬರುತ್ತವೆ. ಅವನ್ನು ಎದುರಿಸುವುದು ಚೈತ್ರಾಳಿಗೂ ಕಷ್ಟ. ಇನ್ನಾದರೂ ಅವಳಿಗೆ ತೊಂದರೆ ಆಗದಿರಲಿ ಎನ್ನುವುದು ನಮ್ಮ ಅಭಿಪ್ರಾಯವಾಗಿತ್ತು. ಆದರೆ ಸುಜಾತಾಗೆ ಲೇಡಿ ಅಟೆಂಡರ್ ಮೇಲೆ ಶಂಕೆ ಇತ್ತು. ಚೈತ್ರಾಳನ್ನು ಅಡ್ಮಿಟ್ ಮಾಡಿದ ಕೂಡಲೇ ಮುಂಜಾಗ್ರತೆಯಿಂದ ಆಕೆಯನ್ನು ವಾಪಾಸು ಕಳಿಸಿದ್ದರೂ ಆಕೆ ವದಂತಿ ಹರಡಬಹುದು ಎನ್ನುವ ಅನುಮಾನ ವ್ಯಕ್ತಪಡಿಸಿದ್ದರು.

ನಾನು ಚೈತ್ರಾಳ ಜೊತೆ ಮಾತಾನಾಡುವುದನ್ನು ಕಡಿಮೆ ಮಾಡಿದ್ದೆ. ನನ್ನನ್ನು ಒಳಗೊಂಡ ಊಹಾ ಪೋಹಗಳು, ನಿಂದನೆಗಳು ಕಿವಿಗೆ ಬೀಳುತ್ತಿದ್ದವು. ಒಂದೆರಡು ಸಲ ಅವಳೇ ಕರೆ ಮಾಡಿದ್ದಳು. ನಾನು ಮಾತನಾಡುವ ಆಸಕ್ತಿ ತೋರಿಸಲಿಲ್ಲ. 'ನಿಮ್ಮ ಹತ್ತಿರ ಮಾತನಾಡುವುದಿದೆ ಸಿಗ್ತೀರಾ?' ಎಂದು ಕೇಳಿದಾಗಲೂ ಸದರ ಬೇಡವೆಂದು, ಪುರುಸೊತ್ತಿಲ್ಲ ಎಂದಿದ್ದೆ. ಕೆಲವು ದಿನಗಳ ನಂತರ ಒತ್ತಾಯಿಸಿದಾಗ ಇಲ್ಲವೆನ್ನಲಾಗಲಿಲ್ಲ.

ಚೈತ್ರಾಳ ಹಾಸ್ಟೆಲ್ ಸಮೀಪ ಇರುವ ರೆಸ್ಟೋರೆಂಟ್‌ನಲ್ಲಿ ಭೇಟಿಯಾಗುವುದೆಂದು ತೀರ್ಮಾನಿಸಿದೆವು. ನಾನು ಹೊತ್ತಿಗಿಂತ ಮುಂಚೆ ರೆಸ್ಟೋರೆಂಟಿಗೆ ಹೋಗಿ ಯಾರೊಡನೆಯೋ ಫೋನಲ್ಲಿ ಮಾತನಾಡುತ್ತಿರುವಾಗ, ನನ್ನ ದನಿಯನ್ನು ಕೇಳಿ ಸ್ಟಿಕ್ ಆಡಿಸುತ್ತಾ ಬಂದು ನನ್ನ ಎದುರಿನ ಕುರ್ಚಿಯನ್ನು ಎಳೆದು ಕೂತಳು. ನಡೆಯಲ್ಲಿ ಲವಲವಿಕೆ ಇರಲಿಲ್ಲ.

'ನಿಮ್ಗೆ ತುಂಬಾ ಥ್ಯಾಂಕ್ಸ್. ನಾವು ಮತ್ತೆ ಭೇಟಿಯಾಗ್ಲೇ ಇಲ್ಲ'

'ನನಗೆ ಯಾಕೆ ಥ್ಯಾಂಕ್ಸ್ ಹೇಳ್ತೀರಾ? ಥ್ಯಾಂಕ್ಸ್ ಹೇಳಬೇಕಾದ್ದು ಸುಜಾತಾಗೆ ಮತ್ತು ಜಿ.ಎಂಗೆ. ಅವರಿಲ್ಲದಿದ್ದರೆ ಏನು ಮಾಡುವುದಕ್ಕೂ ಆಗುತ್ತಿರಲಿಲ್ಲ'.

ಅವಳು ವೈಟರ್‌ಗೆ ಆ ಹೋಟೆಲ್ ಹೆಸರು ವಾಸಿಯಾಗಿದ್ದ ಮಸಾಲೆ ದೋಸೆಗೆ ಆರ್ಡರ್ ಮಾಡಿದಳು. ನಾನು ನನ್ನಿಷ್ಟದ ಮಂಗ್ಳೂರು ಬಜ್ಜಿ ಹೇಳಿದೆ.

ಆಫೀಸ್ ವಾತಾವರಣದ ಬಗ್ಗೆ ವಿಚಾರಿಸಿದೆ. ಕೈಲಿದ್ದ ಕರ್ಚೀಪಿನಿಂದ ಮುಖ ಒರೆಸಿಕೊಂಡು ಚಣ ಸುಮ್ಮನಾದಳು.

'ನಂಗೆ ಟ್ರಾನ್ಸ್‌ಫರ್ ಬೇಕು'

'ಎಲ್ಲಿಗೆ?' ಆಶ್ಚರ್ಯದಿಂದ ಕೇಳಿದೆ.

'ನಮ್ಮೂರಿಗೆ'

'ಯಾಕೆ?'

ಹೇಳುವುದೋ ಬೇಡವೋ ಎನ್ನುವ ಸಂದಿಗ್ಧದಲ್ಲಿದ್ದಂತಿತ್ತು. ವೈಟರ್ ತಿಂಡಿ ತಂದಿಟ್ಟ.

'ತಗೊಳ್ಳಿ' ಎಂದೆ.

ಒಂದೆರಡು ತುತ್ತು ತಿಂದಳು. ಶಬ್ದಗಳು ನಿಧಾನವಾಗಿ ಹೊರಬಂದವು.

ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ನಂತರ ಆಫೀಸಿನ ವಾತಾವರಣದಲ್ಲಿ ಬದಲಾವಣೆ ಆಗಿತ್ತು. ಜೊತೆಯಲ್ಲಿ ಓಡಾಡುತ್ತಿದ್ದವರು ದೂರವಾಗಿದ್ದರು. ಅವಳಾಗಿ ಮಾತನಾಡಿದರೂ ಪ್ರತಿಕ್ರಿಯಿಸುತ್ತಿರಲಿಲ್ಲ. ಊಟ- ತಿಂಡಿಯ ಸಮಯದಲ್ಲಿ, ಬಿಡುವಿನ ಹೊತ್ತಲ್ಲಿ ಸೇರುತ್ತಿರಲಿಲ್ಲ. ಬೆನ್ನಹಿಂದೆ ಆಡಿಕೊಳ್ಳುವ ಮಾತುಗಳು ಕಿವಿಗೆ ಅಪ್ಪಳಿಸುತ್ತಿದ್ದವು. ಕಣ್ಣಿಲ್ಲದಿದ್ದರೂ ಆಡುವ ಆಟಕ್ಕೇನೂ ಕಮ್ಮಿ ಇಲ್ಲ. 'ಕಲರ್ ಕಲರ್ ಡ್ರೆಸ್ ಹಾಕಿ, ಫೇಶಿಯಲ್ ಮಾಡಿಸಿ, ಗಾಗಲ್ಸ್ ಹಾಕಿಕೊಂಡು ಮೆರೀತಾಳೆ' ಎಂದು ಸಹೋದ್ಯೋಗಿ ಮಹಿಳೆಯರೇ ಆಡಿಕೊಳ್ಳುತ್ತಿದ್ದರು... 'ಒಬ್ಬರನ್ನು ಬುಟ್ಟಿಗೆ ಹಾಕೊಂಡು ಬೇಕಾದ್ದು ಮಾಡಿಕೊಂಡಳು, ಇನ್ನು ಯಾರ್‍ಯಾರನ್ನು ಒಲಿಸಿಕೊಳ್ಳುತ್ತಾಳೋ...' ಚುಚ್ಚುವ ಮಾತುಗಳು... ಮಾತುಗಳನ್ನು ಆಡಲಾರದೆ ಆಕೆಯ ಗಂಟಲು ಕಟ್ಟಿತು. ಅಳಲು ಕಮ್ಮಿಯಾಗಲಿ ಎಂದು ನಾನು ಮಾತಿಲ್ಲದೆ ಕೂತೆ. ನನಗೆ ಬಿಡುಗಡೆ ಬೇಕು, ಕಾಡುವ ನೆನಪುಗಳು, ನೋಯಿಸುವ ಮಾತುಗಳಿಂದ ಪಾರಾಗಬೇಕು. ದಯವಿಟ್ಟು ಟ್ರಾನ್ಸ್‌ಫರ್ ಕೊಡಿಸಿ ಎಂದವಳು ಗದ್ಗದವಾಗಿ ಹೇಳುವಾಗ ಸಂಕಟವಾಯಿತು. ತಣ್ಣಗಾದ ಮಂಗ್ಳೂರು ಬಜ್ಜಿ